ಅಸಲು ದಾವೆ ನಂಃ 397/2018 ಪಿ.ಡಬ್ಲ್ಯೂ1-ಶಿವಯ್ಯ ತಂದೆ ಬಸಯ್ಯ ಹಿರೇಮಠ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 18/02/2025 ರಂದು ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ **SBS** ವಕೀಲರಿಂದಃ

1. ನಾನು ಖಾಯಂ ರಾಜೂರ್ ನಲ್ಲಿ ಮನೆ ನಂ.347 ರಲ್ಲಿ ವಾಸವಾಗಿದ್ದೇನೆ. ನಾನು ನಿವೃತ್ತ ಎ.ಎಸ್.ಐ. ಇರುತ್ತೇನೆ. ಗಜೇಂದ್ರಗಡ ಪೊಲೀಸ್ ಠಾಣೆಯಲ್ಲಿ ನಿವೃತ್ತಿ ಹೊಂದಿರುತ್ತೆನೆ. ವಾದಿ ನಂ.2 ಮಲ್ಲಿಕಾರ್ಜುನಯ್ಯ ನನ್ನ ಅಣ್ಣನ ಮಗ . ದಾವಾ ಆಸ್ತಿ ಬಸ್ ಸ್ಟ್ಯಾಂಡ್ ಹತ್ತಿರ ಇರುವ ರಿ.ಸ.ನಂ.205/2 ರಲ್ಲಿ ಮಾಡಿದ ಪ್ಲಾಟ್ ನಂ.1, 2 ಮತ್ತು 8. ಖಾನ ಸಾಬ ರೋಣ, ಹುಸೇನಸಾಬ ಕಳಕಾಪೂರ , ಶರಣಪ್ಪ ಮೇಟಿ , ಸುರೇಶ ವ್ಯಾಪಾರಿ ನಮಗೆ ಆತ್ಮೀಯರು ಎಂದರೆ ಸರಿಯಲ್ಲ. ಸಾಕ್ಷಿ ನಾವು ಅವರಿಗೆ ಪ್ಲಾಟ್ ಅನ್ನು ಮಾರಾಟ ಮಾಡಿದ್ದಾಗಿ ಹೇಳುತ್ತಾರೆ. ನಾನು ಮೇಲೆ ಹೇಳಿದವರ ಕಡೆಯಿಂದ ಅಸಲು ದಾವಾ ನಂ.378/23 ಎಂದು ಮತ್ತೊಂದು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಎರಡು ದಾವೆ ಒಬ್ಬರ ಹೆಸರಿನಲ್ಲಿಯೇ ಇದೆ ಎಂದರ ನನಗೆ ಗೊತ್ತಿಲ್ಲ. ಈ ಕೇಸ ಮಾತ್ರ ನನಗೆ ಸಂಬಂಧ ಇದೆ ಎಂದು ಹೇಳುತ್ತಾರೆ. ವಿ.ಪಿ.ಸಿ.ನಂ.408/386 ದಾವಾ ಆಸ್ತಿಯಾದ 1 ಮತ್ತು 8 ನೇ ಪ್ಲಾಟ್ ನ ಉತ್ತರಕ್ಕೆ ಇದೆ ಎಂದರೆ ಸಾಕ್ಷಿಯು ಸಾರ್ವಜನಿಕ ರಸ್ತೆ ಇದೆ ಎಂದು ಹೇಳುತ್ತಾರೆ. ವಿ.ಪಿ.ಸಿ.ನಂ.408/386 ಹಂಡೆ ವಜೀರ ಕ್ಷೇಮಾಭಿವೃದ್ಧಿ ಸಂಘಕ್ಕೆ ಸೇರಿದಂತಹ ಆಸ್ತಿ ಎಂದರೆ ಸರಿಯಲ್ಲ. ನಮ್ಮ ಪ್ಲಾಟ್‌ನ ಉತ್ತರಕ್ಕೆ ರಸ್ತೆಯಿದೆ ಎಂದು ಹೇಳುತ್ತಾರೆ . ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 1 ನೇ ಪ್ರತಿವಾದಿಯ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸಾಕ್ಷಿಯು ಅಲ್ಲಿ ಅವರ ಯಾವುದೇ ಆಸ್ತಿ ಇಲ್ಲ ಎಂದು ಹೇಳುತ್ತಾರೆ. ಅಸಲು ದಾವಾ ನಂ.120/2018 ಅನ್ನು ನಾನು ಮತ್ತು ಮಲ್ಲಿಕಾರ್ಜುನಯ್ಯ ಸೇರಿ ಸಂಗಮೇಶ್ವರ ಟ್ರಸ್ಟ ಕಮಿಟಿ ಇವರ ವಿರುದ್ಧ ಇದೇ ಆಸ್ತಿಗೆ ಸಂಬಂಧಪಟ್ಟಂತೆ ಕೇಸ ಮಾಡಿದ್ದೇವು ಎಂದರೆ ನಿಜ. ಆ ಕೇಸ ವಜಾ ಆಗಿತ್ತು ಎಂದರೆ ನಿಜ. ಸದರಿ ಸಂಗಮೇಶ್ವರ ಟ್ರಸ್ಟ ಕಮಿಟಿ ಈಗ ಹೆಸರು ಬದಲಾವಣೆ ಆಗಿ ಹಂಡೆ ವಜೀರ ಕ್ಷೇಮಾಭಿವೃದ್ಧಿ ಸಂಘ ಎಂದು ದಾಖಲಾಗಿದೆ ಎಂದು ಹೇಳುತ್ತಾರೆ. ವಜಾ ಆದ ಕೇಸಿನ ವಿರುದ್ಧ ನಾವು ಯಾವುದೇ ಅಪೀಲು ಸಲ್ಲಿಸಿಲ್ಲ ಎಂದರೆ ನಿಜ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದು ನೀಡಲಾಯಿತು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.